# ಐ.ಸಿ.ಎ.ಆರ್ - ಕೇಂದ್ರೀಯ ಒಳನಾಡು ಮೀನುಗಾರಿಕೆ ಸಂಶೋಧನಾ ಸಂಸ್ಥೆ, ಬ್ಯಾರಕ್ಪೋರ್, ಕೋಲ್ಕತ - 700120

## ಕೋವಿಡ್–19 (ಕರೋನ ವೈರಾಣು) ನಿಯಂತ್ರಿಸಲು– ನದಿ, ಅಳಿವೆಗಳು, ಕಾಲುವೆ ಮತ್ತು ಜರಿ ಪಾತ್ರದ ಮೀನುಗಾರರು ಪಾಲಿಸಬೇಕಾದ ಕ್ರಮಗಳು

ಕೋವಿಡ್–19 (ಕರೋನ ವೈರಾಣು) ಸಾಂಕ್ರಾಮಿಕ ರೋಗದ ಕಾರಣ ಭಾರತದ ಅನೇಕ ರಾಜ್ಯಗಳು ಲಾಕ್‌ಡೌನ್‌ಮಾಡಿದ್ದರೂ ಮೀನುಗಾರಿಕೆಗೆ, ಮೀನುಕೃಷಿ ಚಟುವಟಿಕೆಗಳಿಗೆ ಹಾಗೂ ಮೀನು ಸಾಗಾಣಿಕೆಗೆ ಲಾಕ್‌ಡೌನ್‌ನಿಂದ ವಿನಾಯಿತಿ ನೀಡಲಾಗಿದೆ. ಮೀನು ಬೇಗ ಕೆಡುವುದರಿಂದ ತುರ್ತಾಗಿ ಮಾರುಕಟ್ಟೆಗೆ ಸಾಗಾಣಿಕೆ ಮಾಡುವುದು ಅನಿವಾರ್ಯವಾಗಿರುತ್ತದೆ. ಹಾಗಾಗಿ ಮೀನುಗಾರರು ಸಾಮಾಜಿಕ ಅಂತರ, ವೈಯಕ್ತಿಕ ಸ್ವಚ್ಛತೆ, ಮಾಸ್ಕ್ ಧರಿಸುವುದು, ಕೈಗಳನ್ನು ಸಾಬೂನಿನಿಂದ ತೊಳೆಯುವುದು ಹಾಗೂ ಮೀನುಗಾರಿಕಾ ಸಲಕರಣೆಗಳನ್ನು ಸ್ವಚ್ಛಗೊಳಿಸುವುದರ ಮುಖಾಂತರ ಕೋವಿಡ್–19 ರೋಗವು ಹರಡದಂತೆ ಸುರಕ್ಷತಾ ಕ್ರಮಗಳನ್ನು ಅನುಸರಿಸುವುದು ಕಡ್ಡಾಯ.

**ಕೋವಿಡ್–19 (ಕರೋನ ವೈರಾಣು) ನಿಯಂತ್ರಿಸಲು–ಮೀನುಗಾರರು ಹಾಗೂ ಮೀನುಗಾರರ ಸಹಕಾರ ಸಂಘಗಳು ಪಾಲಿಸಬೇಕಾದ ಕ್ರಮಗಳು/ನಿಬಂಧನೆಗಳು**

- ಮೀನುಗಾರಿಕೆ ಮಾಡುವಾಗ ಹಾಗೂ ಮೀನುಗಾರಿಕೆಯ ನಂತರ ಮೀನುಗಾರರು ವೈಯಕ್ತಿಕ ಸ್ವಚ್ಛತೆ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು.






- ಮೀನುಗಾರಿಕೆಯಲ್ಲಿ ತೊಡಗಿರುವವರು ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಹಾಗೂ ನಿಯಮಿತವಾಗಿ ಸಾಬೂನಿನಿಂದ /ಸ್ಯಾನಿಟೈಸರ್‌ನಿಂದ ಕೈ ತೊಳೆಯುವುದು.

- ಮೀನುಗಾರಿಕಾ ದೋಣಿಗಳನ್ನು ನಡೆಸುವಾಗ ಹಾಗೂ ಬಲೆಗಳನ್ನು ಬಿಡುವಾಗ ಮೀನುಗಾರರು ಕನಿಷ್ಠ 3 ಅಡಿಗಳ ಅಂತರ ಮತ್ತು ಹೆಚ್ಚು ದೋಣಿಗಳಿದ್ದರೆ ಕನಿಷ್ಠ 3 ಮೀಟರ್ ಅಂತರ ಕಾಯ್ದುಕೊಳ್ಳಬೇಕು. ನಾಡ ದೋಣಿಗಳಲ್ಲಿ ಕೇವಲ ಇಬ್ಬರು ಮೀನುಗಾರರು ಮಾತ್ರ ಕಾರ್ಯನಿರ್ವಹಿಸಬೇಕು.




- ಊಟ ಮಾಡುವಾಗ, ವಿಶ್ರಾಂತಿ ತೆಗೆದುಕೊಳ್ಳುವಾಗ ಹಾಗೂ ಮೀನುಸಾಗಾಣಿಕೆ ಮಾಡುವಾಗ 3–4 ಅಡಿ ಸಾಮಾಜಿಕ ಅಂತರವನ್ನು ತಪ್ಪದೇ ಕಾಯ್ದುಕೊಳ್ಳಬೇಕು.




- ಮೀನುಗಾರಿಕೆಗೆ ಬಳಸುವ ಬಲೆ, ದೋಣಿ ಹಾಗೂ ಇತರೆ ಸಲಕರಣೆಗಳನ್ನು ಪ್ರತೀ ಬಾರಿಯೂ ಮೀನು ಹಿಡುವಳಿ ಮಾಡಿದಾಗ ಸಾಬೂನಿನ ದ್ರಾವಣದಲ್ಲಿ ತೊಳೆದ ನಂತರ 1 % ಸೋಡಿಯಂ ಹೈಪೋಕ್ಲೋರೈಟ್ ದ್ರಾವಣದಲ್ಲಿ 5 ನಿಮಿಷಗಳು ಕಾಲ ನೆನೆಸಿದ ನಂತರ ಬಿಸಿಲಿನಲ್ಲಿ ಒಣಗಿಸಬೇಕು ಅಥವಾ ಸಾಂಪ್ರಾದಾಯಿಕ ಬಳಸುವ ಸೋಂಕು ನಿವಾರಕ ಬೇವಿನ ದ್ರಾವಣದಲ್ಲಿ ಮೀನುಗಾರಿಕಾ ಸಲಕರಣೆಗಳನ್ನು ನೆನೆಸಿದ ನಂತರ ಬಿಸಿಲಿನಲ್ಲಿ ಒಣಗಿಸಬೇಕು.




- ಮೀನು ಇಳಿದಾಣ ಸ್ಥಳಗಳನ್ನು ನಿಯಮಿತವಾಗಿ ಬ್ಲೀಚಿಂಗ್ ಪೌಡರ್, ಸೋಡಿಯಂ ಹೈಪೋಕ್ಲೋರೈಟ್ ಹಾಗೂ ಇತರ ಸೋಂಕು ನಿವಾರಕ ದ್ರಾವಣಗಳಿಂದ ಸ್ವಚ್ಚಗೊಳಿಸಬೇಕು.







ಮೀನು ಹರಾಜು ಕೇಂದ್ರಗಳನ್ನು ನಿರ್ಧಿಷ್ಠ ಅವಧಿಯಲ್ಲಿ ತೆರೆಯಬೇಕು ಹಾಗೂ ಹರಾಜಿನಲ್ಲಿ ಭಾಗವಹಿಸುವವರನ್ನು ಮೀನುಗಾರಿಕಾ ಸಹಕಾರ ಸಂಘಗಳು ನಿಯಂತ್ರಿಸಿ ಕೋವಿಡ್–19 ತಡೆಗಟ್ಟುವಲ್ಲಿ ಸುರಕ್ಷತಾ ಕ್ರಮಗಳನ್ನು ಪಾಲಿಸಲು ಕಡ್ಡಾಯವಾಗಿ ಸೂಚಿಸಬೇಕು.

- ಮೀನುಗಾರರ ಕುಟುಂಬದವರು ಬೇರೆ ಸ್ಥಳಗಳಿಗೆ ವಲಸೆ ಹೋದರೆ ಅಥವಾ ಬೇರೆ ಸ್ಥಳಗಳಿಂದ ವಲಸೆ ಬಂದರೆ ಕಡ್ಡಾಯವಾಗಿ 14 ದಿನಗಳ ಕಾಲ ಗೃಹ ದಿಗ್ಬಂಧನದಲ್ಲಿರಬೇಕು. ಮಕ್ಕಳು ಹಾಗೂ ಗರ್ಭಿಣಿಯರು ಮೀನುಗಾರಿಕೆಯಲ್ಲಿ ಕಡ್ಡಾಯವಾಗಿ ತೊಡಗಿಸಿಕೊಳ್ಳಬಾರದು.

